ರಾಜ್ಯದಲ್ಲಿನ ಹೈಸ್ಕೂಲ್‌ಗಳಲ್ಲಿ ಉರ್ದು ಬಿ.ಎಡ್ ಮಾಡಿರುವ ಉಪಾಧ್ಯಾಯರ ಬಗ್ಗೆ.

2392(3082)

ಶ್ರೀ ಶ್ರೀನಿವಾಸಗೌಡ ಕುದುವನಹಳ್ಳಿ ಕೆ.(ಕೋಲಾರ): ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ರಾಜ್ಯದಲ್ಲಿರುವ ಹೈಸ್ಕೂಲ್‌ಗಳಲ್ಲಿನ ಉರ್ದು ಬಿ.ಎಡ್. ಮಾಡಿರುವ ಉಪಾಧ್ಯಾಯರ ಹುದ್ದೆ ಎಷ್ಟಿವೆ?

2. ಸದರಿ ಹುದ್ದೆಗಳನ್ನು ತುಂಬಲು ಏನು ಕ್ರಮ ತೆಗೆದುಕೊಳ್ಳಲಾಗಿದೆ?

3. ನಮ್ಮ ರಾಜ್ಯದಲ್ಲಿ ಉರ್ದು ಬಿ.ಎಡ್ ಕಾಲೇಜು ಇದೆಯೇ?

4. ಇದ್ದರೆ ಎಷ್ಟಿವೆ?

5. ಕೋಲಾರ ಸರ್ಕಾರಿ ಜೂನಿಯರ್ ಕಾಲೇಜಿನಲ್ಲಿ ಉರ್ದು ಟೀಚರ್ ಹುದ್ದೆಯು ಎಂದಿನಿಂದ ಖಾಲಿ ಇದೆ?

6. ಖಾಲಿ ಇರಲು ಕಾರಣವೇನು?

7. ಬಿ.ಎಡ್. ಇಲ್ಲದೆ ಉರ್ದು ಮುನ್ಷಿ(ಟೀಚರ್)ತೆಗೆದುಕೊಳ್ಳಲು ಸಾಧ್ಯವೇ?

8. ಸಾಧ್ಯವಿದ್ದರೆ, ಕೋಲಾರ ಜಿಲ್ಲೆಯಲ್ಲಿರುವ ಉರ್ದು ಮೀಡಿಯಂ ಇರುವ ಶಾಲೆಗಳಲ್ಲಿ ತುಂಬಲು ತೊಂದರೆ ಏನು?

ಶ್ರೀ ಹೆಚ್.ವಿಶ್ವನಾಥ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):

1. ಇಲ್ಲ.

2. ಪ್ರಶ್ನೆ ಉದ್ಭವಿಸುವುದಿಲ್ಲ.

3. ಇಲ್ಲ.

4. ಪ್ರಶ್ನೆ ಉದ್ಭವಿಸುವುದಿಲ್ಲ.

5. ಹುದ್ದೆ ಖಾಲಿ ಇರುವುದಿಲ್ಲ.

6. ಪ್ರಶ್ನೆ ಉದ್ಭವಿಸುವುದಿಲ್ಲ.

7. ಇಲ್ಲ. ತರಬೇತಿ ಇಲ್ಲದ ಶಿಕ್ಷಕರ ನೇಮಕಾತಿಗೆ ವ್ಯಂದ ಮತ್ತು ನೇಮಕಾತಿ ನಿಯಮಗಳಲ್ಲಿ ಅವಕಾಶವಿರುವುದಿಲ್ಲ.

8. ಕೋಲಾರ ಜಿಲ್ಲೆಯಲ್ಲಿ ಮೂರು ಹುದ್ದೆಗಳು ಖಾಲಿ ಇದ್ದು, ಸಧ್ಯದಲ್ಲೇ ಬಡ್ತಿ ಮತ್ತು ನೇರ ನೇಮಕಾತಿಗಳ ಮೂಲಕ ಭರ್ತಿ ಮಾಡಲಾಗುವುದು.

ಕೋಲಾರ ಕಮಲಾನೆಹರು ಸ್ಯಾನಿಟೋರಿಯಂ ಆಸ್ಪತ್ರೆ.

2393(3083)

ಶ್ರೀ ಶ್ರೀನಿವಾಸಗೌಡ ಕುದವನಹಳ್ಳಿ ಕೆ.(ಕೋಲಾರ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೋಲಾರ ಕಮಲಾನೆಹರು ಸ್ಯಾನಿಟೋರಿಯಂ ಆಸ್ಪತ್ರೆ ಎಂದು ಕಟ್ಟಲಾಗಿದೆ.

ಆ) ಅಂದಿನಿಂದ ಇಂದಿನವರೆಗೆ ಎಷ್ಟು ಸಾರಿ ಸುಣ್ಣ ಬಣ್ಣ ಹಚ್ಚಲಾಗಿದೆ?

ಇ) ಈಗ ಸರ್ಕಾರದ ಆಸ್ಪತ್ರೆಗಳಿಗೆ ಎಆರ್ (ಅನ್ಯುಯಲ್ ರಿಪೇರ್ಸ್) ಪ್ರತಿ ವರ್ಷ ತೆಗೆದುಕೊಳ್ಳಲು ಕಾರ್ಯಕ್ರಮವಿದೆಯೇ?

ಈ) ಇದ್ದರೆ ಇದಕ್ಕೆ ಎಷ್ಟು ಹಣ ಒದಗಿಸಲಾಗಿದೆ.

ಡಾ: ಎ.ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) 1957ರಿಂದ 1953ರ ಅವಧಿಯಲ್ಲಿ ಈ ಆಸ್ಪತ್ರೆಯನ್ನು ನಿರ್ಮಿಸಲಾಯಿತು.

ಆ) ಅನುದಾನದ ಲಭ್ಯತೆಯನ್ನು ಅವಲಂಬಿಸಿ ಹಾಗೂ ಅನುದಾನಕ್ಕೆ ಸೀಮಿತಗೊಳಿಸಿ ಪ್ರತಿ ವರ್ಷ ಸುಣ್ಣ ಬಣ್ಣ ಹಚ್ಚಲಾಗುತ್ತಿದೆ.

ಇ) ನಿರ್ದಿಷ್ಟವಾದ ಕಾರ್ಯಕ್ರಮವಿರುವುದಿಲ್ಲ. ಆದರೂ ಸಹ ಬಳಕೆ ಇಲಾಖೆಯವರ ಅಗತ್ಯತೆಗನುಗುಣವಾಗಿ ಮೂಲಭೂತವಾಗಿ ಕೈಗೊಳ್ಳಬೇಕಾಗಿರುವ ಅತ್ಯಾವಶ್ಯಕ ದುರಸ್ತಿ ಮತ್ತು ನಿರ್ವಹಣೆಯನ್ನು ಮಿತವ್ಯಯವಾಗಿ ಅನುದಾನದ ಲಭ್ಯತೆಯನ್ನಾಧರಿಸಿ ಕಾಮಗಾರಿಗಳನ್ನು ವರ್ಷವಿಡೀ ವಾರ್ಷಿಕ ದುರಸ್ತಿ ಅಡಿಯಲ್ಲಿ ಕೈಗೊಳ್ಳಲಾಗುತ್ತಿದೆ.

ಈ) ಸರ್ಕಾರಿ ಆಸ್ಪತ್ರೆಗಳ ವಾರ್ಷಿಕ ದುರಸ್ತಿಗಳಿಗಾಗಿ ರೂ.90.76 ಲಕ್ಷಗಳ ಅನುದಾನವನ್ನು ಒದಗಿಸಲಾಗಿದೆ.